ತಿಳಿದಹಾಗೆ ಕೊಡಗು ಜಿಲ್ಲೆ ಅಥವಾ ಯಾವುದೇ ಮಲೆನಾಡು ಪ್ರದೇಶವನ್ನು ಬಯಲುಸೀಮೆಗೆ ಹೋಲಿಸಿದರೆ ಸಮ್ಮಲ್ಲಿ ರಸ್ತೆ ಅಭಿವೃದ್ಧಿಗೆ, ಸೇತುವೆ ಅಭಿವೃದ್ಧಿಗೆ ಇಟ್ಟಿರುವ ಹಣ ಏನೇನೂ ಸಾಲದು. ಬಯಲುಸೀಮೆಯಲ್ಲಿ ಒಂದು ಕಿಲೋಮೀಟರ್ ರಸ್ತೆಗೆ ಕಲ್ವರ್ಟ್ ಏನೂ ಇರುವುದಿಲ್ಲ. ಆದರೆ ಮಲೆನಾಡು ಪ್ರದೇಶದಲ್ಲಿ ಒಂದು ಕಿಲೋಮೀಟರ್ ರಸ್ತೆಯಲ್ಲಿ ನಾಲ್ಕೈದು ಕಲ್ವರ್ಟ್‌ಗಳಿರುತ್ತವೆ. ಇದರಿಂದ ಅಲ್ಲಿ ಸೇತುವೆಗಳಿಗೆ ಹೆಚ್ಚು ಹಣ ಬೇಕಾಗುತ್ತದೆ. ೫೦-೬೦ ಲಕ್ಷ ರೂಪಾಯಿಗಳಿಲ್ಲದೆ ಸೇತುವೆಗಳನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೆಚ್ಚಿಗೆ ಹಣ ಕೊಡಬೇಕು. ಮತ್ತು ಪರ್ವದಲ್ಲಿ ೮ ತಿಂಗಳು ಮಲೆನಾಡು ಪ್ರದೇಶದಲ್ಲಿ ಮಳೆ ಬರುವುದರಿಂದ ಅಲ್ಲಿ ಸ್ಕೂಲ್ ಕಟ್ಟಡಗಳಾಗಲೀ ಆಸ್ಪತ್ರೆ ಕಟ್ಟಡಗಳಾಗಲೀ ಬಹಳ ಕೆಟ್ಟ ಪರಿಸ್ಥಿತಿಯಲ್ಲಿರುತ್ತವೆ. ಆದ್ದರಿಂದ ಇನ್ನೂ ಹೆಚ್ಚಿನ ಹಣವನ್ನು ಮಲೆನಾಡು ಅಭಿವೃದ್ಧಿ ಮಂಡಳಿಗೆ ದೊರಕಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತು ಇದರ ಆಫೀಸನ್ನು ಬೆಂಗಳೂರಿಗೆ ಶಿಫ್ಟ್ ಮಾಡಬೇಕೆಂದು ಕೇಳುತ್ತೇನೆ. ನಿಮಿ ಮಲೆನಾಡು ಪ್ರದೇಶಗಳು ಏನಿವೆ, ಅಂಥ ಪ್ರದೇಶಗಳನ್ನು ಕೈಬಿಟ್ಟು ಹೆಚ್ಚು ಮಳೆ ಬರುವ ಪ್ರದೇಶಗಳನ್ನು ಆದಕ್ಕೆ ಆಳವಡಿಸಿ ಹೆಚ್ಚಿನ ಹಣವನ್ನು ಒದಗಿಸಿ ಕೊಡಬೇಕೆಂದು ಹೇಳಿ ತಾವು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು.—ಶ್ರೀಮತಿ ದಮಯಂತಿ ಬೋರೇಗೌಡ ಅವರು ಇಲ್ಲಿ ನ್ಯಾಯ ದೊರಕಿಸಿಕೊಡಿ ಎಂದು ಬರೆದು ಕೊಟ್ಟಿದ್ದಾರೆ. ಅದಕ್ಕೆ ಅವರನ್ನು ಕರೆದೆ.

ಶ್ರೀಮತಿ ಪೋಟಮ್ಮ.—ನ್ಯಾಯ ದೊರಕಿಸಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೆ, ಈ ಮುಂಗಡ ಪತ್ರದ ಮೇಲೆ ಚರ್ಚೆ ಮುಕ್ತಾಯವಾಗಿದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರ್.—ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.—ನಾಳೆ ಕ್ಲಾರಿಫಿಕೇಷನ್ ಬೇಕಾದರೆ ಕೇಳಲಿ.

ಶ್ರೀ ಮಂಜುನಾಥ ಸಿ. ಕುನ್ನೂರ್.—ನಾಳೆ ಬೆಳಿಗ್ಗೆ ಆದರೂ ಅವಕಾಶ ಕೊಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ನಾಳೆ ಮುಖ್ಯಮಂತ್ರಿಗಳು ಮಾತನಾಡುವಾಗ.....

ಶ್ರೀ ಮಂಜುನಾಥ ಸಿ. ಕುನ್ನೂರ್.—ಮೊದಲು ನಾನು ಮಾತನಾಡುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೪ನೇ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

† ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ. ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ೧೯೯೪ನೇ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಇದರ ಉದ್ದೇಶ ಜಲ ಅಥವಾ ವಿದ್ಯುಚ್ಛಕ್ತಿ, ಉತ್ಪಾದನೆ, ಶೇಖರಣೆ, ಸಾಗಣೆ, ಪೂರೈಕೆ ಮತ್ತು ವಿತರಣೆ, ಮೋಟಾರು ವಾಹನಗಳು ಪ್ರಯಾಣಿಕರಿಗೆ ಅಥವಾ ಸರಕುಗಳನ್ನು ಸಾಗಿಸುವುದಕ್ಕಾಗಿ ಇರುವ ಸಾರಿಗೆ ಸೇವೆಗೆ ಸಂಬಂಧಿಸಿದ ಮತ್ತು ರಾಜ್ಯ ವಿಧಾನಮಂಡಲವು ಕಾನೂನುಗಳನ್ನು ರಚಿಸಲು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧಿಕಾರವನ್ನು ಹೊಂದಿರುವಂಥ ದೊವುದೇ ಇತರೆ ಸೇವೆ ಅಥವಾ ಉದ್ಯೋಗ ಅಥವಾ ಆದರ ವರ್ಗಕ್ಕೆ ಸಂಬಂಧಿಸಿದ ಕೆಲವು ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡುವುದನ್ನು ನಿರಾಕರಿಸುವುದನ್ನು ನಿಷೇಧಿಸುವುದಕ್ಕೋಸ್ಕರ ಈ ವಿಧೇಯಕವನ್ನು ಸದನದ ಒಪ್ಪಿಗೆಗಾಗಿ ತರುತ್ತಿದ್ದೇವೆ. ಇದು ಸಾರ್ವಜನಿಕ ಹಿತದೃಷ್ಟಿ, ಜನರ ಅವಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರವಾಗಿ, ಜನರ ದೈನಂದಿನ ಜೀವನಕ್ಕೆ ಯಾವುದೇ ರೀತಿಯಲ್ಲಿ ತೊಂದರೆ ಬರದ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೋಸ್ಕರ ಈ ಒಂದು ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು,—ಪ್ರಸ್ತಾಪ ಏನೆಂದರೆ, "ರ್ಗಳಿನೇ ಸಾಲಿನ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡದೆ ಹೀಗೆ ವಿಧೇಯಕವನ್ನು ಮಂಜೂರು ಮಾಡಿಕೊಳ್ಳುತ್ತಿರುವುದು ಸರಿಯಲ್ಲ. ಕಾರ್ಮಿಕರ ಹಕ್ಕನ್ನು ಕಸಿದು ಕೊಳ್ಳುವ ವಿಧೇಯಕ ಇದು. ಅತ್ಯಾವಶ್ಯಕ ಸೇವೆಗಳಿಗೆ ಸಂಬಂಧಿಸಿದ ಈ ವಿಧೇಯಕದ ಮೇಲೆ ಚರ್ಚೆ ಮಾಡುವುದು ಅವಶ್ಯಕತೆಯಿದೆ. ಇದು ಚರ್ಚೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್.—ಇದು ಸಮಗ್ರವಾಗಿ ಚರ್ಚೆಯಾಗಬೇಕು. ನಮಗೆ ಆದರ ಪ್ರತಿ ಗಳನ್ನು ಕೊಡಿ. ಇದು ಚರ್ಚೆಯಾಗಲಿ. ಈಗ ೭.೩೦ ಗಂಟೆಯಾಯಿತು. ಇನ್ನೂ ಎಷ್ಟು ಹೊತ್ತಿನವರೆಗೆ ಚರ್ಚೆ ಮಾಡುವುದಕ್ಕೆ ಹೊರಟಿದ್ದೀರಿ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಮಾನ್ಯ ಅಧ್ಯಕ್ಷರೆ, ಇ ದು ಇವತ್ತು ಪರಿಶೀಲನೆಯಾಗಬೇಕೆಂದು ಹಾಗೂ ಪಾಸಾಗಬೇಕೆಂದು ಮೊದಲೇ ತಮ್ಮೆಲ್ಲರಿಗೂ ಗೊತ್ತಿರುವ ಪ್ರಕಾರ ಅರಿಕೆ ಮಾಡಿಕೊಂಡಿದ್ದೇವೆ. ತಾವು ಚರ್ಚೆಯಲ್ಲಿ ಭಾಗವಹಿಸುವುದಾದರೆ ಭಾಗವಹಿಸಿ. ನಮ್ಮ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಇದು ಇವತ್ತು ಸಭೆಯಲ್ಲಿ ಪಾಸಾಗಬೇಕು.

ಶ್ರೀ ವಾಟಾಳ್‌ನಾಗರಾಜ್.—ಹಾಗಾದರೆ ಇವತ್ತು ರಾತ್ರಿ ೧ ಗಂಟೆಯವರೆಗೆ ನಾವು ಇಲ್ಲಿ ಕುಳಿತು ಕೊಳ್ಳಬೇಕಾ ? ಇತ್ತೀಚಿನ ಕಾರ್ಯಕ್ರಮಗಳು ಹೇಗಾಗುತ್ತಿವೆ ಗೊತ್ತೇನು ? ತಮಗೆ ಬೇಕಾದಾಗ ರಾತ್ರಿ ೧೨ ಗಂಟೆಯವರೆಗೆ ಕುಳಿತುಕೊಳ್ಳುತ್ತೀರಿ. ನಿಮಗೆ ಬೇಡವಾದಾಗ ಎದ್ದು ಎದ್ದು ಹೊರಗಡೆ ಹೋಗುತ್ತೀರಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಲೋಕಸಭೆಯಲ್ಲಿ ಹೆಚ್ಚಿನ ಕೆಲಸ ಕಾರ್ಯಗಳು ಇದ್ದರೆ ಬೆಳಿಗಿನ ಜಾವ ೫ ಗಂಟೆಯವರೆಗೂ ಕುಳಿತುಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಹೌದಾ ಸ್ವಾಮಿ ? ಕೆಲಸ ಕಾರ್ಯಗಳು ಇದ್ದರೂ ಸಹ ನೀವು ಎದ್ದು ಹೋಗಿರುವುದನ್ನು ನಾವು ನೋಡಿಲ್ಲವೆ ಸ್ವಾಮಿ ? ಇದ್ದಕ್ಕಿದ್ದ ಹಾಗೆ ನಮಗೂ ಗೊತ್ತಿಲ್ಲದ ಹಾಗೆ ನೀವು ಎದ್ದು ಹೋಗಿಲ್ಲವೆ ಸ್ವಾಮಿ ? ಹೊರಗಡೆ ಹೋಗಿರುವುದನ್ನು ಅಧ್ಯಕ್ಷರು ನೋಡಿಲ್ಲವೆ ಸ್ವಾಮಿ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಸದಸ್ಯರು ಇದಕ್ಕೆ ಸಹಕಾರ ಕೊಡಿ ಇದಕ್ಕೆ ಒಪ್ಪಿಗೆ ಕೊಡಬೇಕು.

SRI QUMARUL ISLAM.—Even the bills are not given to us till now.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಈ ಹಿಂದೆ ಬಿಲ್ ಕಾಪಿಗಳನ್ನು ಕೊಟ್ಟಿದ್ದೇವೆ.

ಶ್ರೀ ಪಾಟೀಳ್ ನಾಗರಾಜ್.—ಪೋಲೀಸ್ ರಾಜ್ಯದ ಕಡೆ ಹೋಗತಕ್ಕ ಬಿಲ್ ತಂದಿದ್ದಾರೆ. ಇದು ಮಿಲಿಟರಿ ಪ್ರಭುತ್ವಕ್ಕೆ ಹೋಗತಕ್ಕ ಬಿಲ್. ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇಲ್ಲಿ ನಾಲ್ಕೈದು ಜನ ವಿರೋಧಪಕ್ಷದವರು ಇದ್ದೀವಿ. ಸಂಪೂರ್ಣ ಎಲ್ಲ ವಿರೋಧಪಕ್ಷದವರು ಬಂದಾಗ ಸದನದ ಮುಂದೆ ಇದನ್ನು ಮಂಡಿಸಿ ನಾವು ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ೧೭ನೇ ತಾರೀಖು ಸಾರಿಗೆ ಸಂಸ್ಥೆಯವರು ಚಳುವಳಿ ಮಾಡುತ್ತಾರೆಂದುಕೊಂಡು ತರಾತುರಿಯಲ್ಲಿ ಈವೊಂದು ಮಸೂದೆಯನ್ನು ಮಂಡಿಸಿ ಸರ್ವಾಧಿಕಾರದ ಹಕ್ಕನ್ನು ನಿಮ್ಮ ಕೈಯಲ್ಲಿ ತೆಗೆದುಕೊಂಡಿ. ಅವರ ಹಕ್ಕನ್ನು ದಮನ ಮಾಡತಕ್ಕ ಹಾಗೂ ತುಳಿಯತಕ್ಕ ವ್ಯವಸ್ಥೆ ಏನಿದೆ, ಅದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇದು ತರಾತುರಿಯಲ್ಲಿ ತಂದಿರತಕ್ಕದ್ದು ಅಲ್ಲ. ಇದು ಚರ್ಚೆಗೆ ಬರುತ್ತದೆಂದು ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿದೆ. ಇಂದಿನ ಎಲ್ಲ ಕಾರ್ಯಕ್ರಮಗಳನ್ನು ಪೂರೈಸಿ ಕೊಳ್ಳುವುದು ನಮ್ಮ ಜವಾಬ್ದಾರಿ ಆಗಿದೆ. ಕೆಲವೊಂದು ಸಾರಿ ನಿಗದಿತ ವೇಳೆಗಿಂತ ಮುಂಚೆ ಕಾರ್ಯ ಕ್ರಮಗಳು ಮುಗಿಯುತ್ತವೆ. ಕೆಲವು ಸಾರಿ ವೇಳೆ ಜಾಸ್ತಿಯಾಗುತ್ತದೆ. ಆಗುವಾಯ ದಿವಸ ಏನೇನು ಕಾರ್ಯಕ್ರಮಗಳು ಇರುತ್ತವೆ ಅವುಗಳನ್ನು ಪೂರೈಸಿಕೊಂಡರೆ ನಮಗೆ ಮುಂದಿನ ದಿವಸ ಏನೇನು ಕಾರ್ಯಕ್ರಮಗಳು ಪಟ್ಟಿಯಲ್ಲಿರುತ್ತವೆ, ಅವುಗಳನ್ನು ಪೂರೈಸುವುದಕ್ಕೆ ಬರುತ್ತದೆ. ಆ ರೀತಿ ಮಾಡದೆ ಮುಂದೆ ತಳ್ಳುತ್ತಾ ಹೋದರೆ ನಾಳೆಯ ಕಾರ್ಯಕ್ರಮಕ್ಕೆ ನಮಗೆ ಸಮಯ ಸಿಗುವುದಿಲ್ಲ. ಆದ್ದರಿಂದ ಇವತ್ತು ಇದನ್ನು ಪಾಸ್ ಮಾಡಲೇಬೇಕು.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ಮಾನ್ಯ ಕಾಗೋಡು ತಿಮ್ಮಪ್ಪನವರು ಚಳುವಳಿಯ ಮುಖಾಂತರ ಬಂದವರು. ಈಗ ಅದನ್ನು ಹತ್ತಿಕ್ಕಲಿಕ್ಕೆ ಹೊರಟಿದ್ದಾರೆ. ಹಾಗಾದರೆ ಯಾರೂ ಚಳುವಳಿಯನ್ನು ಮಾಡಬಾರದೆನ್ನುವ ತೀರ್ಮಾನಕ್ಕೆ ಅವರು ಬಂದಿದ್ದಾರೋ ?

ಶ್ರೀ ಕಾಗೋಡು ತಿಮ್ಮಪ್ಪ.—ಚಳುವಳಿಯನ್ನು ಹತ್ತಿಕ್ಕಬೇಕೆಂದು ಇದರಲ್ಲಿ ಇದೆಯೇ ?

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಬೇಕು. ತರಾತುರಿಯಲ್ಲಿ ಇದನ್ನು ತಂದಿರುವುದು ಸರಿಯಲ್ಲ.

ಅಧ್ಯಕ್ಷರು.—ಮಾನ್ಯ ಬಾಬಗೌಡರೇ, ಇದನ್ನು ದಿನಾಂಕ ೧೬-೨-೯೪ರಂದು ಮಂಡಿಸಲಾಗಿದೆ. ತಾವು ಚರ್ಚೆ ಮಾಡುವುದಾದರೆ ಮಾಡಿ.

ಶ್ರೀ ಪಾಟೀಳ್ ನಾಗರಾಜ್.—ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಚರ್ಚೆ ಮಾಡುವುದು ಬೇರೆ ಪ್ರಶ್ನೆ. ಈಗ ಕಾಲ ೭.೩೦ ಗಂಟೆಯಾಯಿತು. ಸಮಯ ಬಂದರೆ ರಾತ್ರಿ ೧೧ ಗಂಟೆಯವರೆಗೂ ಕುಳಿತುಕೊಳ್ಳಬೇಕಾಗುತ್ತದೆಂದು ಪಾರ್ಲಿಮೆಂಟಿನದ್ದೆಲ್ಲ ಉದಾಹರಣೆ ಕೊಡುತ್ತಿದ್ದಾರೆ. ಇದು ಏನಾಗಿದೆ ಅಂದರೆ ಅನುಕೂಲ ಸಿಂಧು ಇದ್ದ ಹಾಗೆ. ತಮಗೆ ಬೇಕಾದರೆ ಬೆಳಗಿನಜಾವದವರೆಗೂ ಕುಳಿತುಕೊಳ್ಳ ಬಹುದು. ತಮಗೆ ಬೆಡದೆ ಇದ್ದಾಗ ಯಾವಾಗ ಬೇಕಾದರೂ ಸದನವನ್ನು ಮುಂದೂಡಬಹುದು. ಇದು ಸಂಸದೀಯ ವ್ಯವಹಾರಗಳ ಸಚಿವರ ಹೊಸ ನೀತಿ. ಈ ರಾಜ್ಯದ ಪ್ರಭುಧನು ಸಂಸದೀಯ ವ್ಯವಹಾರಗಳ ಸಚಿವರ ಹೊಸ ನೀತಿ ಇದು. ನಮ್ಮ ಹಿರಿಯ ಸಚಿವರಾದ ಹಾರ್ನಳ್ಳಿ ರಾಮಸ್ವಾಮಿ ಯವರು ತಂದಿರತಕ್ಕ ಬಂದು ಹೊಸ ನೀತಿ ಇದು.

ಶ್ರೀ ಕಾಗೋಡು ತಿಮ್ಮಪ್ಪ.—ರಾತ್ರಿ ೧೨ ಗಂಟೆಯವರೆಗೂ ಕುಳಿತು ಚರ್ಚೆ ಮಾಡಿದ ವಿಷಯಗಳು ಇವೆ.

ಶ್ರೀ ಪಾಟೀಳ್ ನಾಗರಾಜ್.—ನಾನು ಇಲ್ಲವೆಂದು ಹೇಳಲಿಲ್ಲ. ಆದರೆ ನೀವು ಅನುಕೂಲ ಸಿಂಧು. ನೀವು ಯಾವ ಗಳಿಗೆಯಲ್ಲಿ ಏನು ಬೇಕಾದರೂ ಮಾಡುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮಗೆ ಬೇಕಾದಾಗ ಸದನದಲ್ಲಿರುವುದು ಬೇಡವಾದಾಗ ಸಭೆಯಿಂದ ಹೊರಗೆ ಹೋಗುವುದು.

ಶ್ರೀ ವಾಟಾಳ್ ನಾಗರಾಜ್.—ನಾನು ಎಂದೂ ಆ ತರಹ ಇಲ್ಲ. ನಮಗೆ ಈ ಸದನದಲ್ಲಿ ರಕ್ಷಣೆ ಕೊಡತಕ್ಕವರು ನೀವು. ತಾವು ಸ್ವಲ್ಪ ಎಲ್ಲ ವಿರೋಧಪಕ್ಷದ ಸದಸ್ಯರು ಸಭೆಗೆ ಬರುವವರೆಗೆ ಇದನ್ನು ತಡೆಹಿಡಿಯಬೇಕು. ಮುಂದೆ ಆಪರು ಬರಬಹುದು, ಬರತಕ್ಕ ಸೂಚನೆಗಳು ಇರಬಹುದು. ಬರುವುದಿಲ್ಲವೆನ್ನುವ ಸೂಚನೆಗಳು ಇಲ್ಲ. ಇಂತಹ ಪ್ರಮುಖವಾದ ಪ್ರಶ್ನೆ ಬಂದಿರುವಾಗ ಆದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ. ದಯವಿಟ್ಟು ಇದನ್ನು ತಾವು ಮುಂದಕ್ಕೆ ಹಾಕಿ. ಮುಂದೆ ಚರ್ಚೆ ಮಾಡೋಣ.

ಅಧ್ಯಕ್ಷರು.—ತಾವು ಶುರು ಮಾಡಿ. ಕೆಲವು ಜನ ಸದಸ್ಯರು ಚರ್ಚೆ ಮಾಡಲಿ.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ಮೂಲಭೂತ ಹಕ್ಕನ್ನು ಈ ವಿಧೇಯಕದ ಮೂಲಕ ಕಸಿದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಚರ್ಚೆಗೆ ಅವಕಾಶ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ವಾರ ಏನೂ ಕಾರ್ಯಕಲಾಪಗಳು ಇಲ್ಲದೆ ಕಾಲ ಕಳೆದಿದ್ದೇವೆ.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ಅದನ್ನು ನಾನು ಒಪ್ಪುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಕಾಗೋಡು ತಿಮ್ಮಪ್ಪನವರು ಸಮಾಜವಾದಿ ಸಿದ್ಧಾಂತದಿಂದ ಬಂದಿರತಕ್ಕವರು. ತಮ್ಮಿಂದ ಈ ಮಾತು ಬರಬಾರದು. ಇದು ಆಗಬಾರದು.

ಶ್ರೀ ಕಾಗೋಡು ತಿಮ್ಮಪ್ಪ.—ಗೋಕಾಲಾಷ್ಟಮಿಗೂ ಇಮಾಮ್‌ಸಾಬಿಗೂ ಏನು ಸಂಬಂಧ ?

ಶ್ರೀ ವಾಟಾಳ್ ನಾಗರ್‌ಜ್.—ಇಮಾಮ್ ಸಾಹೇಬರಿಗೂ ಗೋಕುಲಾಷ್ಟಮಿಗೂ ಏಕೆ ಸಂಬಂಧವಿಲ್ಲ ? ಸಂಬಂಧವಿದೆ. ಅದು ಹಳೆಯ ಮಾತು.

ಅಧ್ಯಕ್ಷರು.—ತಾವು ಚರ್ಚೆ ಶುರು ಮಾಡಿ.

ಶ್ರೀ ವಾಟಾಳ್ ನಾಗರಾಜ್.—ವಿರೋಧಪಕ್ಷದ ಸದಸ್ಯರನ್ನು ಹೊರಗೆ ಹಾಕಿ ಇಂತಹ ಕೆಟ್ಟ ಬಿಲ್ಲುಗಳನ್ನು ತರುತ್ತೀರಿ. ಇಲ್ಲಿ ನಮ್ಮನ್ನು ಚರ್ಚೆ ಮಾಡಿಯೆಂದು ಹೇಳುತ್ತೀರಿ ? ಈ ಅಧಿವೇಶನದಲ್ಲಿ ಯಾರೂ ಬರಬಾರದೆಂದು ಅವರನ್ನು ಪೂರ್ತಿ ಹೊರಗಡೆ ಹಾಕಿದ್ದೀರಿ. ಈಗ ಇದರ ಬಗ್ಗೆ ಚರ್ಚೆ ಮಾಡಿಯೆಂದು ಹೇಳುತ್ತೀರಿ.

ಶ್ರೀ ಪಾರ್ನಳ್ಳಿ ರಾಮಸ್ವಾಮಿ.—ಇದನ್ನು ಪಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಪರಿಶೀಲನೆಯಾಗಲೇಬೇಕು.

ಶ್ರೀ ವಾಟಾಳ್ ನಾಗರಾಜ್.—ಆಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ದಯವಿಟ್ಟು ಹತ ಮಾಡಬೇಡಿ, ಹತಮಾರಿಶನ ಮಾಡಬೇಡಿಯೆಂದು ಸರ್ಕಾರಕ್ಕೆ ನೀವು ಹೇಳಬೇಕು.

ಶ್ರೀ ಪಾರ್ನಳ್ಳಿ ರಾಮಸ್ವಾಮಿ.—ಒಂದೊಂದು ದಿವಸಕ್ಕೂ ಬೆಲೆಯಿದೆ. ಬೆಂಗಳೂರಿನಲ್ಲಿರತಕ್ಕ ೪೫ ಲಕ್ಷ ಜನಗಳಿಗೆ ಇವತ್ತು ಗುಡಾಂತರ ಬರುವ ಪರಿಸ್ಥಿತಿ ಇದೆ.

ಶ್ರೀ ಕಮಾರುಲ್ ಇಸ್ಲಾಂ.—ಒಂದು ದಿವಸ ಪೋಸ್ಟ್‌ಪೋನ್ ಮಾಡಿದರೆ ಏನೂ ಆಗುವುದಿಲ್ಲ. The sky will not fall.

ಶ್ರೀ ಪಾರ್ನಳ್ಳಿ ರಾಮಸ್ವಾಮಿ.—ಇಂತಹ ಕಾನೂನನ್ನು ಕೇರಳದಲ್ಲಿ ತಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇದರ ಬಗ್ಗೆ ಸಮಗ್ರವಾದ ರೀತಿಯಲ್ಲಿ ಚರ್ಚೆಯಾಗಬೇಕು. ವಿರೋಧಪಕ್ಷದ ಸದಸ್ಯರುಗಳೆಲ್ಲರೂ ಬಂದಮೇಲೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ, ಈಗ ಇದರ ಚರ್ಚೆಗೆ ಅವಕಾಶ ಕೊಡಬೇಡಿ.

SRI QUMARUL ISLAM.—This is an important Bill. We want to discuss it tomorrow. Kindly postpone the discussion till tomorrow.

The sky will not fall if it is postponed for one day. We have received the copy just now. I have received the English copy just now.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ಅನ್ಯಾಯವಾದರೆ ಅನ್ಯಾಯವಾಗಿದೆಯೆಂದು ಹೇಳುವುದು ಬೇಡವೆ ?

ಶ್ರೀ ಪಾಟಾಳ್ ನಾಗರಾಜ್.—ಇದು ಸರ್ವಾಧಿಕಾರ ಆಡಳಿತದ ಮಸೂದೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಲೇಬೇಕಾಗುತ್ತದೆ. ಇಂತಹ ಮಸೂದೆ ತಮ್ಮ ಕಾಲದಲ್ಲಿ ಪಾಸಾಗಬಾರದು. ಪಾಸಾದರೆ ಇದು ಇತಿಹಾಸದಲ್ಲಿ ಹೋಗುತ್ತದೆ. ದಯವಿಟ್ಟು ಇದನ್ನು ಮುಂದಕ್ಕೆ ಹಾಕಿ, ಎಲ್ಲರೂ ಬರಲಿ. ನಾನು ತಮಗೆ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ನಾಳೆ ವಿರೋಧ ಪಕ್ಷಗಳ ಕೆಲವು ಮುಖಂಡರನ್ನು ತಾವು ಕರೆಸಿ ಮಾತುಕತೆಯಾಡಿ. ಅವರು ಬರತಕ್ಕಂಥ ಒಂದು ವ್ಯವಸ್ಥೆಯನ್ನು ಅಯಾಮವನ್ನು ಸೃಷ್ಟಿ ಮಾಡೋಣ. ದಯವಿಟ್ಟು ಅಲ್ಲಿಯವರೆಗೆ ಇದನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು,—ಈಗ ಏನೂ ಮಾಡುವುದಕ್ಕೆ ಆಗುವುದಿಲ್ಲ. ತಾವು ಚರ್ಚೆಯನ್ನು ಶುರುಮಾಡಿ.

ಶ್ರೀ ಪಾಟಾಳ್ ನಾಗರಾಜ್.—ನಾಳೆ ಇದನ್ನು ತೆಗೆದುಕೊಳ್ಳಿ ಸ್ವಾಮಿ, ದಯವಿಟ್ಟು ನಮ್ಮದು ಒಂದು ಮಾತನ್ನು ಕೇಳಿ ಸ್ವಾಮಿ,

(ಗೊಂದಲ)

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ಇಂತಹ ಮಸೂದೆಯನ್ನು ತರಾತುರಿಯಲ್ಲಿ ಪಾಸ್ ಮಾಡಬಾರದು,

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ನಾನು ನಿನ್ನೆಯಿಂದ ನಿಮ್ಮಲ್ಲಿ ಮನವಿ ಮಾಡಿಕೊಂಡಿದ್ದೇನೆ. ತಾವು ಕೂಡ ವಿಧೇಯಕವನ್ನು ಪಾಸ್‌ಮಾಡಿಕೊಡುವುದಕ್ಕೆ ಏನೂ ತೊಂದರೆ ಕೊಡುವುದಿಲ್ಲ ಎಂದು ಹೇಳಿದ್ದೀರಿ.

ಶ್ರೀ ಪಾಟಾಳ್ ನಾಗರಾಜ್.—ಯಾವುದು, ಇದಕ್ಕಾ ? ಇದು ಒಂದು ಕರಾಳ ವಿಧೇಯಕ. ಮೂಲಭೂತ ಹಕ್ಕನ್ನೇ ಕಸಿಯತಕ್ಕಂಥ ಒಂದು ವಿಧೇಯಕ.

ಒಬ್ಬರು ಮಾನ್ಯ ಸದಸ್ಯರು.—ಇದು ಮುಂಜಿನೆಯೇ ಆಗಿಲ್ಲ...

ಸಭಾಧ್ಯಕ್ಷರು,—ಮುಂಜಿನೆಯಾಗಿದೆ. ತಾವು ಚರ್ಚೆ ಶುರು ಮಾಡಿ. ತಮಗೆ ಅವಕಾಶ ಮಾಡಿ ಕೊಟ್ಟಿದ್ದೇನೆ, ಚರ್ಚೆಮಾಡಿ,

ಶ್ರೀ ಪಾಟಾಳ್ ನಾಗರಾಜ್.—ನಾನು ತಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಕೆ. ಹರ್ಷಕುಮಾರ್‌ಗೌಡ.—ಮತಕ್ಕೆ ಹಾಕುವ ಸಮಯದಲ್ಲಿ ಹೀಗೆ ವಿರೋಧ ಮಾಡುತ್ತಿದ್ದಾರೆ.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಹರ್ಷಕುಮಾರಗೌಡರೇ, ತಮ್ಮಿಂದ ನಾವು ಬುದ್ಧಿ ಕಲಿಯಬೇಕಾಗಿಲ್ಲ. ತಮಿಂದ, ವೆಂಕಟೇಶ್ ಅವರಿಂದ ಬುದ್ಧಿ ಕಲಿಯಬೇಕಾದ ದುರ್ದೆಸೆ ನಮಗೆ ಬಂದಿಲ್ಲ. ಸ್ವಾಮಿ, ಇದು ಕಾರ್ಮಿಕರ ಚಳುವಳಿಯನ್ನು ಹತ್ತಿಕ್ಕತಕ್ಕಂಥ ಮತ್ತು ಕಾರ್ಮಿಕರನ್ನು ಕೊಲೆ ಮಾಡತಕ್ಕಂಥ ಮಸೂದೆ ಇದು ಒಳ್ಳೆಯದಲ್ಲ. ಸನ್ಮಾನ್ಯ ಭೀಮಣ್ಣ ಖಂಡ್ರೆಯವರು ಈ ಕಾರ್ಮಿಕರ ಮೇಲೆ ಯಮನ ಪಾಶವನ್ನು ಹಿಡಿದುಕೊಂಡು ಹೊರಟಿದ್ದಾರೆ. ಇದು ಯಮನ ಪಕ್ಕದೃಷ್ಟಿ. ಈ ಮಸೂದೆ ನಿಮಗೆ ಕೆಟ್ಟ ಹೆಸರನ್ನು ಖಂಡಿತವಾಗಿಯೂ ತರುತ್ತದೆ. ಈ ಮಸೂದೆಯನ್ನು ತಾವು ಮಂಡಿಸಲೇ ಬಾರದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ಎಲ್ಲ ವಿರೋಧಪಕ್ಷದ ಸದಸ್ಯರೂ ಸಭೆಗೆ ಬರಲಿ. ಸಮಗ್ರವಾದ ಚರ್ಚೆಯಾಗಲಿ.

ಅಧ್ಯಕ್ಷರು.—ಇದು ಮುಂಜಿನೆಯಾಗಿದೆ. ನಾನು ಚರ್ಚೆಗೆ ಆಸ್ಪದ ಮಾಡಿಕೊಡುತ್ತಿದ್ದೇನೆ. ತಾವು ಚರ್ಚೆ ಶುರುಮಾಡಿ.

ಶ್ರೀ ವಾಟಾಳ್ ನಾಗರಾಜ್.—ಇಲ್ಲ ಇವತ್ತು ಇದು ಮುಗಿಯುವ ಹಾಗಿಲ್ಲ ಸ್ವಾಮಿ.

ಅಧ್ಯಕ್ಷರು.—ನೋಡೋಣ. ನೀವು ಚರ್ಚೆ ಶುರುಮಾಡಿ.

ಶ್ರೀ ವಾಟಾಳ್ ನಾಗರಾಜ್.—ಏಳೂವರೆ ಗಂಟೆಗೆ ಕುಳಿತುಕೊಂಡು ಹೇಗೆ ಶುರು ಮಾಡೋಣ ? ಇದರ ಬಗ್ಗೆ ಚರ್ಚೆ ಮಾಡುತ್ತಾ ಕುಳಿತುಕೊಂಡರೆ ರಾತ್ರಿ ಹನ್ನೆರಡು ಗಂಟೆಯಾಗುತ್ತದೆ.

ಅಧ್ಯಕ್ಷರು.—ಅದೂ ಆಗಬೇಕು, ಇದೂ ಆಗಬೇಕು ಎಂದರೆ ಹೇಗೆಸ್ವಾಮಿ ? ತಾವು ಚರ್ಚೆ ಶುರುಮಾಡಿ.

ಶ್ರೀ ವಾಟಾಳ್ ನಾಗರಾಜ್.—ಇದು ಕಾರ್ಮಿಕರ ಪಕ್ಕನ್ನು ಕಿತ್ತುಕೊಳ್ಳುವ ಯಮ ಪಾಶ..

ಅಧ್ಯಕ್ಷರು.—ವಾಟಾಳ್ ನಾಗರಾಜ್‌ರವರೇ, ನಾನು ಹೇಳುತ್ತಿದ್ದೇನೆ, ತಾವು ಚರ್ಚೆಯನ್ನು ಶುರುಮಾಡಿ. ಇದು ಬೇಡ, ಈಗ ಬೇಡ ಎಂದರೆ ಹೇಗೆ ಆಗುತ್ತದೆ ? ತಮಗೆ ನಾನು ಕಳಕಳಿಯಿಂದ ಕೇಳುತ್ತಿದ್ದೇನೆ, ಚರ್ಚೆಯನ್ನು ಶುರು ಮಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ರಾಮಸ್ವಾಮಿಯವರೇ, ನಿಮ್ಮ ದೈತ್ಯಶಕ್ತಿಯಿಂದ, ಕಾರ್ಮಿಕರನ್ನು ದಮನ ಮಾಡತಕ್ಕಂಥ ನೀತಿಗೆ ತಾವು ಹೊರಟ್ಟಿದ್ದೀರಿ. ನಿಮ್ಮ ಮುಖ್ಯಮಂತ್ರಿಗಳನ್ನೂ ಸಹ ನೀವು ದಾರಿತಪ್ಪಿಸುತ್ತಿದ್ದೀರಿ. ಅವರಿಗೆ ಕೆಟ್ಟ ಹೆಸರು ತರತಕ್ಕಂಥ ಎಲ್ಲ ವ್ಯವಸ್ಥೆ ನಡೆದಿದೆ. ಸಾರಿಗೆ ಸಚಿವರಿಗೆ ಈ ಕಷ್ಟ ಗೊತ್ತಿಲ್ಲ. ಅವರು ವಿಧಾನಪರಿಷತ್ ಸದಸ್ಯರು. ಕಾರ್ಮಿಕರ ಬಗ್ಗೆ ಅವರಿಗೆ ಏನು ಗೊತ್ತಿದೆ ? ಕಾರ್ಮಿಕರನ್ನು ಸಮಾಧಿ ಮಾಡತಕ್ಕಂಥ ಇಂತಹ ಮನಸೂರೆಯನ್ನು ನೀವು ತರಬಾರದಾಗಿತ್ತು.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ಅಲ್ಲಿ ಗಾಂಧೀಜಿಯವರ ಫೋಟೊ ಹಾಕಿಕೊಂಡು ಕುಳಿತ್ತಿದ್ದೀರಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಅದನ್ನು ತಾವು ಚರ್ಚೆಯಲ್ಲಿ ಹೇಳಿ ಸ್ವಾಮಿ,

ಶ್ರೀ ವಾಟಾಳ್ ನಾಗರಾಜ್.—ದಯವಿಟ್ಟು ಇದನ್ನು ಪಾಪವನ್ನು ತೆಗೆದುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಬಾಬುಗೌಡರೇ, ತಾವು ಚಳುವಳಿ ಬಗ್ಗೆ ಪ್ರಸ್ತಾಪ ಮಾಡಿದಿರಲ್ಲ, ಈ ಚಳುವಳಿಯಲ್ಲಿ ಏನಿದೆ ? ಇದು ಎಸ್‌ಎಸ್‌ಶಿಯಲ್ ಕಮಾಡಿಟೀಸ್.....

ಶ್ರೀ ವಾಟಾಳ್ ನಾಗರಾಜ್.—ನಮಗೆ ಎಲ್ಲಾ ಗೊತ್ತು. ಅಳಿಯ ಅಲ್ಲ, ಮಗಳ ಗಂಡ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಕಾರ್ಮಿಕರ ಪ್ರಶ್ನೆ ಇಲ್ಲ.....

ಶ್ರೀ ವಾಟಾಳ್ ನಾಗರಾಜ್.—ಹೌಮಾ, ಹೌದು, ಏನು ತೊಂದರೆ ಬರುತ್ತದೆ ಎಂಬುದು ತೆರೆಯ ಮರೆಯಲ್ಲಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲೆಲ್ಲಿ ತೊಂದರೆ ಬರುತ್ತದೆ ಎಂಬುದನ್ನು ಹೇಳಿರಿ ನೋಡೋಣ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಈ ತಾಂತ್ರಿಕ ಪದಗಳು ಏನು ಎಂಬುದು ನಮಗೆ ಗೊತ್ತಿದೆ.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್.—ವಿತರಣೆ ಎಂದರೆ ಏನು ? ಸೇವೆ.....

ಶ್ರೀ ವಾಟಾಳ್ ನಾಗರಾಜ್.—ಅವಶ್ಯಕ ಸೇವೆ ಎಂದರೆ ಇನ್ಯಾವುದು ? ಸ್ವಾಮಿ, ಇದು ಸಾರಿಗೆ ಇಲಾಖೆಯ ನೌಕರರು ತಮಗೆ ಆಗಿರುವ ಅನ್ಯಾಯವನ್ನು ಪ್ರತಿಭಟಿಸುವುದಕ್ಕೆ ರಾಜ್ಯಾದ್ಯಂತ ಸತ್ಯಾಗ್ರಹವನ್ನು ಇಟ್ಟುಕೊಂಡಿದ್ದಾರೆ ಈ ಚಳುವಳಿಯನ್ನು ಮುರಿಯತಕ್ಕಂಥ, ಈ ಒಂದು ಯಮ ಪಾಶವನ್ನು, ಶ್ರೀಮಾನ್ ವೀರೇಂದ್ರಯವರು ತಂದು ಪ್ರಜಾಪ್ರಭುತ್ವವನ್ನು ಕೊಲೆ ಮಾಡತಕ್ಕಂಥ ರೀ

ಯಲ್ಲಿ ಹೊರಟಿದ್ದಾರೆ. ಇದು ತಾವು ಅಧ್ಯಕ್ಷರಾಗಿರುವಾಗ ತಮ್ಮ ಕಾಲದಲ್ಲಿ ಪಾಸಾಗಬಾರದು. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಎಲ್ಲ ಸದಸ್ಯರನ್ನು ಸದನಕ್ಕೆ ಕರೆದು ಒಂದು ಶಿಳಿ ವಾತಾವರಣವನ್ನು ನಿರ್ಮಾಣಮಾಡಿ, ಚರ್ಚೆಗೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಖಿಂಡ್ರೆಯವರದ್ದು ಅಲ್ಲ. ಅತ್ಯಾವಶ್ಯಕ ಸೇವೆಗಳ ವಿಧೇಯಕವನ್ನು ೧೯೮೯ರಲ್ಲಿ ತಂದು, ಅದರಲ್ಲಿ ಯಾವ್ಯಾವ ಸರ್ವಿಸ್ ಎಂದು ಹೇಳಿದ್ದಾರೆ. ಅದರ ಪ್ರಕಾರ ಮಾಡಿದ್ದಾರೆ. ಕೇರಳದಲ್ಲಿ ಕೂಡ ಮೊನ್ನೆ ಪಾಸ್ ಮಾಡಿದ್ದಾರೆ.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.—ಸತ್ಸಂಪ್ರದಾಯವನ್ನು ಮುರಿಯುವುದು ಬೇಡ. ತಮ್ಮ ಕೊಠಡಿಗೆ ಬಂದು ನಾವು ಮಾತನಾಡುತ್ತೇವೆ. ಈಗಾಗಲೇ ಏಳುವರೆ ಗಂಟೆಯಾಗಿದೆ.

ಶ್ರೀ ಕಮರುಲ್ ಇಸ್ಲಾಮ್.—ಇದನ್ನು ನಾವು ನಾಳೆ ತೆಗೆದುಕೊಳ್ಳೋಣ.

ಶ್ರೀ ಪಾಟಾಳ್ ನಾಗರಾಜ್.—ರಾಮಸ್ವಾಮಿಯವರೇ, ತಾವು ದಯವಿಟ್ಟು ಹಠ ಮಾಡಬೇಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಇದು ಹಠದ ಪ್ರಶ್ನೆ ಅಲ್ಲ. ಈ ಬೆಂಗಳೂರು ನಗರದ ೪೫ ಲಕ್ಷ ಜನರ ಜೀವನದ ಒಂದು ಪ್ರಮುಖವಾದಂಥ ವಿಷಯ. ಅವರ ಜೀವನಕ್ಕೆ ನಾವು ರಕ್ಷಣೆಯನ್ನು ಕೊಡಬೇಕು. ಅವರಿಗೆ ದಿನನಿತ್ಯದ ಅಗತ್ಯಗಳ ಬಗ್ಗೆ ರಕ್ಷಣೆಯನ್ನು ಕೊಡಬೇಕು. ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ ಕೇಳಿ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕೆಲಸಗಾರರ ಸಂಘದವರು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಏನೆಂದರೆ ನೀರು ಸರಬರಾಜನ್ನು ಕಡಿದುಹಾಕುತ್ತೇವೆ ಎಂದು. ಸ್ವಲ್ಪ ಕೇಳಿ. ಇದರಲ್ಲಿ ಬೆಂಗಳೂರು ನಗರದಲ್ಲಿರತಕ್ಕಂಥ ೪೫ ಲಕ್ಷ ಜನರ ಸಮಸ್ಯೆ ಇದೆ.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್.—ಇದು ಹೊಸದೇನೂ ಅಲ್ಲ. ಅವರ ಬೇಡಿಕೆ ಈಗ ಹುಟ್ಟಿದ್ದಲ್ಲ. ಪ್ರಜಾಪ್ರಭುತ್ವ ಬಂದಾಗಿನಿಂದ, ಸ್ವಾತಂತ್ರ್ಯ ಬಂದಾಗಿನಿಂದ ಈ ಬೇಡಿಕೆ ಇದೆ. ಹೊಸದಾಗಿ ಏನೂ ಬಂದಿಲ್ಲ. ಕಾರ್ಮಿಕರ ಬೇಡಿಕೆಗಳು ಹೊಸದೇನೂ ಅಲ್ಲ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ.—ಮೆಸ್ಟೆಡ್ ಇಂಟರೆಸ್ಟ್‌ನಿಂದ ಹೀಗೆ ಮಾತನಾಡುತ್ತಿದ್ದಾರೆ. ಇವರು ಸಾಮಾನ್ಯ ಜನರ ಬಗ್ಗೆ ನಿಜವಾಗಿಯೂ ಚಿಂತೆ ಮಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.—ತಾವು ಚರ್ಚೆ ಮಾಡುವುದನ್ನು ಬಿಟ್ಟು ಇದೆಲ್ಲ ಹೇಳಿಕೊಳ್ಳುತ್ತಾ ಹೋದರೆ ಹೇಗೆ ? ತಾವು ಚರ್ಚೆಯನ್ನು ಶುರುಮಾಡಿ.

ಶ್ರೀ ಪಾಟಾಳ್ ನಾಗರಾಜ್.—ಎಂಟು ಗಂಟೆಯಾಗಿದೆ.....

ಅಧ್ಯಕ್ಷರು.—ವೇಳೆಯ ಪ್ರಶ್ನೆ ಇಲ್ಲ. ತಾವು ಚರ್ಚೆ ಶುರುಮಾಡಿ.

ಶ್ರೀ ಪಾಟಾಳ್ ನಾಗರಾಜ್.—ಸಲಹಾ ಸಮಿತಿ ಸಭೆಯಲ್ಲಿ ಇದು ತೀರ್ಮಾನವಾಗಿಲ್ಲ.

ಅಧ್ಯಕ್ಷರು.—ಇಪತ್ತಿನ ಕಾರ್ಯಕಲಾಪ ಮುಂಗಿಯಬೇಕಲ್ಲ ? ಇದು ಅದಕ್ಕೆ ಸಂಬಂಧ ಇಲ್ಲ.

ಶ್ರೀ ಪಾಟಾಳ್ ನಾಗರಾಜ್.—ಅದಕ್ಕೆ ಸಂಬಂಧ ಇಲ್ಲ ಎಂದರೆ ಹೇಗೆ ? ಹಾಗಾದರೆ ಈ ಸಮಿತಿ ಗೇನೂ ಬೆಲೆ ಬೇಡವೇ ?

ಅಧ್ಯಕ್ಷರು.—ಸಮಿತಿಯವರು ಏನೂ ಹೇಳಿಲ್ಲ. ಅದು ಹೇಳಿದ ಪ್ರಕಾರ ನಾವು ನಡೆದುಕೊಳ್ಳುತ್ತೇವೆ. ಸಮಿತಿಯವರು ಹೇಳಿದ ಪ್ರಕಾರ ನೀವು ನಡೆದುಕೊಳ್ಳಬೇಕು. ಕಾರ್ಯಕಲಾಪಗಳನ್ನು ನಾವು ಮುಂಗಿಸಬೇಕಲ್ಲ ?

ಶ್ರೀ ವಾಟಾಳ್ ನಾಗರಾಜ್. – ಇದಕ್ಕೆ ನಾವು ಏನು ಹೇಳುವುದು ? ದೇವರೇ ನಮ್ಮನ್ನು ಕಾಪಾಡಬೇಕು. ತಾವು ಈ ಮಟ್ಟದ ತೀರ್ಮಾನಕ್ಕೆ ಬಂದರೆ ಹೇಗೆ ?

ಅಧ್ಯಕ್ಷರು. – ತಾವು ಚರ್ಚೆ ಶುರುಮಾಡಿ.

(ಗೊಂದಲ)

ಶ್ರೀ ಕೆ. ಹರ್ಷಕುಮಾರ್ ಗೌಡ. – ಇದರಲ್ಲಿ ಲಾಜಿಸ್ಟಿಕ್ಸ್ ಇದೆಯಾ ? ಅಥವಾ ಚರ್ಚೆಗೋಸ್ಕರ ಚರ್ಚೆನಾ ಇದು ?

ಶ್ರೀ ವಾಟಾಳ್ ನಾಗರಾಜ್. – ಜನರ ಬಗ್ಗೆ ಆಸಕ್ತಿ ಏನಿದೆ ಎಂದು ಹರ್ಷಕುಮಾರ್ ಗೌಡರಿಗೆ ಗೊತ್ತು, ವೆಂಕಟೇಶ್‌ರವರಿಗೆ ಗೊತ್ತು. ಇಲ್ಲಿ ಒಂದು ನಾಟಕ ಆಡುವುದು ಬೇಡ.

ಶ್ರೀ ಕಾಗೋಡು ತಿಮ್ಮಪ್ಪ. – ಇದರಲ್ಲಿರುವ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನ್ನು ನಾನು ಓದಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್. – ಅದನ್ನು ನಾವು ಓದಿದ್ದೇವೆ. ಬೆಂಗಳೂರು ನಗರದ ಜನರ ಉದ್ಧಾರಕ್ಕೆ ತಂದಿದ್ದೀರಾ ಇದನ್ನು ? ಇದು ಕಾರ್ಮಿಕರನ್ನು ದಮನ ಮಾಡತಕ್ಕಂಥದ್ದಾಗಿದೆ. ಇದು ಪೋಲೀಸ್ ರಾಜ್ಯದ ನೀತಿ ಆಗಿದೆ. ತುರ್ತುಪರಿಸ್ಥಿತಿ ಜಾರಿಗೆ ತರುತ್ತಿದ್ದೀರಿ. ಎಲ್ಲಾದರೂ ಉಂಟೇ ಇದು ?

ಶ್ರೀ ಕೆ. ಹರ್ಷಕುಮಾರ್ ಗೌಡ. – ಈ ರಾಜ್ಯದಲ್ಲಿ ನೀರು ನಿಲ್ಲಿಸುವಂಥ ವ್ಯವಸ್ಥೆ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್. – ಚಳುವಳಿ ಮಾಡತಕ್ಕಂಥಾದ್ದು ನಮ್ಮ ಹಕ್ಕು. ಚಳುವಳಿಗಳನ್ನು ತಡೆಯುವುದಕ್ಕೆ ಈಗಾಗಲೇ ಇರುವ ಕಾನೂನಿನಲ್ಲಿಯೇ ಸಾಕಷ್ಟು ಬಲ ಇದೆ. ಈ ಮಸೂದೆ ತರುವ ಆವಶ್ಯಕತೆ ಇಲ್ಲ. ಇದು ಯಾವ ಪ್ರಜಾಪ್ರಭುತ್ವ ? ಚಳುವಳಿ ತಡೆಯುವುದಕ್ಕೆ ನಮ್ಮಲ್ಲಿ ಅನೇಕ ಕಾನೂನುಗಳು ಇರುವಾಗ ಮತ್ತೆ ಈ ಮಸೂದೆ ತರುವುದು ಸರಿಯಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್. – ಸಾಮಾನ್ಯ ಜನರಿಗೆ ಇದು ವಿಷದ ಗುಳಿಗೆ. ಸಾಮಾನ್ಯ ಜನರ ವಿರುದ್ಧ ಮಾಡಿರತಕ್ಕಂಥ ಕೆಟ್ಟ ಮಸೂದೆ ಇದು.

(ಗೊಂದಲ)

ಅಧ್ಯಕ್ಷರು. – ನಾನು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ತಾವು ಚರ್ಚೆ ಶುರು ಮಾಡಿ. ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ತಾವು ಇದನ್ನು ನೋಡಿದ್ದೀರಿ. ಇದನ್ನು ಆಗಲೇ ಮಂಡನೆ ಮಾಡಿದ್ದೇವೆ. ನಾನು ಚರ್ಚೆಗೆ ಅವ್ಕಾಶ ಮಾಡಿಕೊಡುತ್ತೇನೆ. ತಾವು ಶುರು ಮಾಡಿ.

(ಗೊಂದಲ)

ಅಧ್ಯಕ್ಷರು. – ವಾಟಾಳ್ ನಾಗರಾಜ್‌ರವರೇ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ, ತಾವು ಚರ್ಚೆ ಶುರು ಮಾಡಿ. ಇಲ್ಲದಿದ್ದರೆ ಇದನ್ನು ನಾನು ಮತಕ್ಕೆ ಹಾಕಬೇಕಾಗುತ್ತದೆ.

(ಕನ್ನಡ ಪಕ್ಷದ ವಾಟಾಳ್ ನಾಗರಾಜ್, ಬಿ. ಜೆ. ಪಿ. ಪಕ್ಷದ ಮಾನ್ಯ ರುಕ್ಮಯ್ಯ ಪೂಜಾರಿ, ಶ್ರೀ ನಾರಾಯಣರಾವ್ ಮನಸಳ್ಳಿ, ರೈತ ಸಂಘದ ಮಾನ್ಯ ಜಾಬುಗೌಡ ಪಾಟೀಲ್, ಮುಸ್ಲಿಮ್ ಲೀಗಿನ ಮಾನ್ಯ ಕಮರುಲ್ ಇಸ್ಲಾಮ್ ಅವರು ಅಧ್ಯಕ್ಷ ಪೀಠದ ಮುಂದೆ ಬಂದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವುದರ ನಡುವೆ ವಿಧೇಯಕವನ್ನು ಸಭೆಯ ಮತಕ್ಕೆ ಹಾಕಲಾಯಿತು)

ಅಧ್ಯಕ್ಷರು. – ಪ್ರಸ್ತಾವ ಏನೆಂದರೆ, ೧೯೯೫ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು:

ಖಂಡ ೨ರಿಂದ ೯ರ ವರೆಗೆ

ಅಧ್ಯಕ್ಷರು.— 'ಖಂಡ ೨ರಿಂದ ೯ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ರಿಂದ ೯ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ:—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಹಿತ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಹಿತಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ ೧೯೯೪ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—'ಪ್ರಸ್ತಾವ ಏನೆಂದರೆ ೧೯೯೪ರ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸಭಾ ತ್ಯಾಗ ಮಾಡಿದರು)

೧೯೯೪ರ ಕರ್ನಾಟಕ ಅತ್ಯಾವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.— ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ ೧೯೯೪ರ ಕರ್ನಾಟಕ ಅತ್ಯಾವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲವು ವಸ್ತುಗಳ ಉತ್ಪಾದನೆ ಸರಬರಾಜು ಮತ್ತು ವಿತರಣೆಯನ್ನು ಮತ್ತು ಅವುಗಳಲ್ಲಿ ವ್ಯವಹಾರ ಹಾಗೂ ವಾಣಿಜ್ಯವನ್ನು ನಿಯಂತ್ರಿಸುವುದು

ಕ್ಕಾಗಿ ಈ ವಿಧೇಯಕದಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ದೊಡನೆ ಪರ್ಯಾಲೋಚಿಸಿ ಯಾವುದು ಆವಶ್ಯಕ ವಸ್ತುಗಳೆಂದು ನಾವು ವಿಚಾರ ಮಾಡುತ್ತೇವೆ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಅಗತ್ಯವಾಗಿದೆ. ಆದ್ದರಿಂದ ಇದನ್ನು ಸಭೆ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ 'ಗರ್ಹಳರ ಕರ್ನಾಟಕ ಅತ್ಯಾವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸುವುದು'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು:

ಖಂಡ ೨ರಿಂದ ೧೮ ರವರೆಗೆ:—

ಅಧ್ಯಕ್ಷರು.—'ಖಂಡ ೨ರಿಂದ ೧೮ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೧೮ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ ೧ ಇತ್ಯಾದಿ:—

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ' ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗುತ್ತದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಗರ್ಹಳರ ಕರ್ನಾಟಕ ಅತ್ಯಾವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು; ಪ್ರಸ್ತಾವ ಏನೆಂದರೆ 'ಗರ್ಹಳರ ಕರ್ನಾಟಕ ಅತ್ಯಾವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಪ್ರಕಟಣೆ

(ಗೈರು ಹಾಜರಿಗೆ ಅನುಮತಿ ಕೋರಿಕೆ)

ಅಧ್ಯಕ್ಷರು.—ವಿಧಾನ ಸಭಾ ಸದಸ್ಯರಾಗಿರುವ ಮಾನ್ಯ ವಿರೇಂದ್ರಪಾಟೀಲರು ದಿನಾಂಕ ೨೧-೩-೯೦ ರಿಂದ ಆಯವ್ಯಯ ಉಪವೇಶನ ಮುಗಿಯುವವರೆಗೆ ಗೈರು ಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿದ್ದಾರೆ. ಸನ್ಮಾನ್ಯ ವಿರೇಂದ್ರ ಪಾಟೀಲರು ದಿನಾಂಕ ೨೧-೩-೯೦ರಿಂದ ಉಪವೇಶನ ಮುಗಿಯುವ ವರೆಗೂ ಗೈರು ಹಾಜರಾಗಲು ಸಭೆಯು ಅನುಮತಿ ಕೊಡುತ್ತದೆಯೇ ?